ಅನಿವಾಸಿ ಭಾರತೀಯರು : ಇತರರು - 50,000 ಅಮೇರಿಕನ್ ಡಾಲರ್ ಇಡೀ ಕೋರ್ಸಿಗೆ.

ಆ) ರಾಜ್ಯದ ವಿದ್ಯಾರ್ಥಿಗಳಿಗೆ ಮೆರಿಟ್ ಆಧಾರದ ಮೇಲೆ ಉಚಿತ ಸೀಟುಗಳನ್ನು ಹಂಚಲಾಗುವುದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ವರ್ಗ- 1 ಮತ್ತು ಇದರೆ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಬೋಧಕ ಶುಲ್ಕ ಮರುಪಾವತಿ ಸೌಲಭ್ಯ ಇರುತ್ತದೆ.

ಇ) ಹುಡುಗರು - 7322, ಹುಡುಗಿಯರು - 4686

ಈ) ಪ್ರತೀ ವರ್ಷ ಸರಾಸರಿ 1600 ವೈದ್ಯರು ವೈದ್ಯಕೀಯ ಡಿಗ್ರಿ ಪಡೆದು ಹೊರಬರುತ್ತಿದ್ದಾರೆ.

ಪ್ರಾಥಮಿಕ ಶಿಕ್ಷಣದ ಗುಣಮಟ್ಟದ ಸುಧಾರಣೆ.

2372(2927)

ಶ್ರೀ ರಾಜುಗೌಡ ಜಿ. (ಹನ್ನೂರು): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಸುಧಾರಣೆಗಾಗಿ ಕೇಂದ್ರ ಸರ್ಕಾರ ಕೈಗೊಂಡಿರುವ ಯೋಜನೆಗಳು ಯಾವುವು?

ಆ) ರಾಜ್ಯದ ಹೊಸ ಜಿಲ್ಲೆಗಳಿಗೆ ಯಾವಾಗ ಜಿಲ್ಲಾಶಿಕ್ಷಣ ಮತ್ತು ತರಬೇತಿ ಕೇಂದ್ರಗಳು(ಡಯಟ್) ಪ್ರಾರಂಭಿಸಲಾಗುವುದು?

ಶ್ರೀ ಪೆಚ್.ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) 1. ಕಪ್ಪು ಹಲಗೆ ಕಾರ್ಯಕ್ರಮ

2. ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ

3. ಕೇಂದ್ರ ಪ್ರಾಯೋಜಿತ ಶಿಕ್ಷಕರ ಶಿಕ್ಷಣ ಕಾರ್ಯಕ್ರಮದಡಿ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಗಳ ಸ್ಥಾಪನೆ (ಡಯಟ್).

4. ಕನಿಷ್ಟ ಕಲಿಕಾ ಹಂತ

5. ವಿಜ್ಞಾನ ಶಿಕ್ಷಣ.

6. ಪ್ರಾಥಮಿಕ ಶಿಕ್ಷಣಕ್ಕೆ ಪೌಷ್ಠಿಕತೆಯ ಬೆಂಬಲ.

ಆ) ಇದು ಕೇಂದ್ರ ಸರ್ಕಾರದ ಪ್ರಾಯೋಜಿತ ಕಾರ್ಯಕ್ರಮವಾಗಿರುವುದರಿಂದ ಕೇಂದ್ರಸರ್ಕಾರದೊಡನೆ ಪತ್ರ ವ್ಯವಹಾರ ನಡೆಸಿದೆ. ಈ ಬಗ್ಗೆ ಕೇಂದ್ರಸರ್ಕಾರವು ಜಮೀನು ಮತ್ತು ದೊರಕಬಹುದಾದ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ಕೋರಿದೆ. ಈ ಮಾಹಿತಿಯನ್ನು ಕೇಂದ್ರಸರ್ಕಾರಕ್ಕೆ ಕಳುಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಕೇಂದ್ರ ಸರ್ಕಾರವು ರಾಜ್ಯದ ಹೊಸ ಏಳು ಜಿಲ್ಲೆಗಳಿಗೆ ಡಯಟ್‌ಗಳನ್ನು ಮಂಜೂರು ಮಾಡಿದ ಬಳಿಕ ಡಯಟ್‌ಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಹಾವೇರಿ ಜಿಲ್ಲೆಯ ಗ್ರಾಮೀಣ ಜನತೆಗೆ ನೆದರ್‌ಲ್ಯಾಂಡ್ ಸರ್ಕಾರದ ಸಹಾಯ ಧನದಿಂದ ಕುಡಿಯುವ ನೀರಿನ ಯೋಜನೆ.

2373(3081)

ಶ್ರೀ ರೇವು ನಾಯಕ್ ಬೆಳಮಗಿ (ಕಮಲಾಪೂರ್): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಹಾವೇರಿ ಜಿಲ್ಲೆಯ ಗ್ರಾಮೀಣ ಜನತೆಯ ಕುಡಿಯುವ ನೀರಿನ ಯೋಜನೆಗೆ ನೆದರ್‌ಲ್ಯಾಂಡ್ ಸರ್ಕಾರದಿಂದ ಬಂದಿರುವ ಸಹಾಯ ಧನದ ಮೊತ್ತವೆಷ್ಟು?

ಆ) ಇದರಲ್ಲಿ ಇಲ್ಲಿಯವರೆಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ? ಎಷ್ಟು ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸಲಾಗಿದೆ?

ಇ) ಈ ಯೋಜನೆಯ ಪ್ರಗತಿಯು ಬಹಳ ಕುಂಠಿತವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಯೋಜನೆಯನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಆ) ಹಾವೇರಿ ಜಿಲ್ಲೆಯ 57 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆ ಕೆಲಸವನ್ನು ನೆದರ್‌ಲ್ಯಾಂಡ್ಸ್ ಸಹಯೋಗದಡಿ ಕೈಗೊಳ್ಳಲಾಗಿದೆ. ಸದರಿ ಕಾಮಗಾರಿಗಳ ಅಂದಾಜು ವೆಚ್ಚ ರೂ.916.45 ಲಕ್ಷಗಳು.